ಬರೆದುಕೊಟ್ಟಿರುವುದಾಗಿ ಜೋರು ಮಾಡಿ ಅಂದವರ ಬಾಯಿ ಮುಚ್ಚಿಸಿದ್ದ. ಇದ್ದರೂ ಇರಬಹುದೇನೋ ಅಂದುಕೊಂಡು ಅವರೂ ಸುಮ್ಮನಾಗಿದ್ದರು. ಯಾವಾಗ ಐದಾರು ವರ್ಷಕ್ಕೆಲ್ಲಾ ತೆಂಗಿನ ಸಸಿಗಳು ದಸಿ ನೂಕ ಹತ್ತಿದವ್ವೋ, ಸಿದ್ಮಲ್ಲ ಅದರೊಳಗೊಂದು ಕೊಳವೆ ಬಾವಿಯನ್ನು ಕೊರೆಸಿ ಚೆನ್ನಾಗಿ ಆಬದ್ದು ಮಾತೊಡಗಿದನೋ ಅದು ಕೆಲವರ ಕಣ್ಣು ಕುಕ್ಕುವಂತೆ ಮಾಡಿತ್ತು. ಹಂಗಾಗಿ ಅದಕ್ಕೆ ಸಂಬಂಧಿಸಿದಂತೆ ತಹಸೀಲ್ದಾರರಿಗೆ ಮೂಕರ್ಜಿಯನ್ನೂ ಬರೆದರು. ಆದರೆ, ಸದರಿ ಜಮೀನಿನ ಕಡೆಯವರಾರೂ ತಕರಾರು ಎತ್ತದ್ದರಿಂದಲೂ, ಅದಕ್ಕೆ ಸದ್ಯಕ್ಕೆ ವಾರಸುದಾರರು ಯಾರೂ ಇಲ್ಲದ್ದರಿಂದಲೂ ಆ ಮೂಕರ್ಜಿಗೆ ಮುಂದೆಂದೂ ಮಾತೇ ಬಾರದಂತೆ ಸಿದ್ಮಲ್ಲ ವ್ಯವಸ್ಥೆ ಮಾಡಿಕೊಂಡು ಬಿಟ್ಟಿದ್ದ. ಅದೊಂದು ದಿನ ಸಿದ್ಮಲ್ಲನ ಹೆಸರಿಗೆ ಆ ಜಮೀನಿನ ಖಾತೆ ಪಾಣಿಗಳು ಸಿದ್ಧಗೊಂಡುಬಿಟ್ಟಿದ್ದವು. ಅಲ್ಲಿಗೆ ಕಣ್ಣು ಕುಕ್ಕುತ್ತಿದ್ದವರ ಬಾಯಿಗೆ ಬೀಗ ಬಿದ್ದಿತ್ತು.

ಹಂಗೆ ನೋಡಿದರೆ ಮೂವತ್ತು ವರ್ಷದ ಹಿಂದೆ ಗದ್ದಿಗ್ಯಪ್ಪನಿಗೆ ಹನ್ನೆರಡು ಎಕರೆ ಹೊಲ ಜಮೀನಿತ್ತು. ಅದರಲ್ಲಿ ಅವನು ಐವತ್ತು ಅರವತ್ತು ಚೀಲ ರಾಗಿಯನ್ನೂ, ಹತ್ತಾರು ಪಲ್ಲ ಜೋಳವನ್ನೂ ಬೆಳೆಯುತ್ತಿದ್ದ. ಸಾಲದ್ದಕ್ಕೆ ಹೊಲದ ತಗ್ಗಿನಲ್ಲಿ ದೊಡ್ಡಿ ಬತ್ತವನ್ನೂ ಅಷ್ಟು ವೈನಾಗಿರದಿದ್ದ ಕಲ್ಲು ನೆಲದಲ್ಲಿ ಹಾರಕವನ್ನೂ, ಜೊತೆಗೆ ಅಕ್ಕಡಿ ಸಾಲಿನಲ್ಲಿ ಅವರೆ, ತೊಗರಿ, ಮೆಣಸು ಮುಂತಾದ ವರ್ಷವಿಡೀ ಮನೆಗಾಗುವಷ್ಟು ಕಾಳು ಕಡ್ಡಿಗಳನ್ನು ಬೆಳಕೊಳ್ಳುತ್ತಿದ್ದ. ಮಗ ಕೈಗೆ ಬರುತ್ತಲೇ ಅಪ್ಪ ವಚ್ಚಾಲಯ್ಯ ಬೇಸಾಯದ ಬದುಕನ್ನು ಪೂರಾ ಗದ್ದಿಗ್ಯಪ್ಪನ ಸುಪರ್ದಿಗೆ ಬಿಟ್ಟುಕೊಟ್ಟು ತಾನು ಒಂದೆರಡು ಕರೇವಿನ ಎಮ್ಮೆಗಳನ್ನು ಕಾಯುತ್ತಾ ಮನೆಯಲ್ಲಿ ಹಾಲು, ಬೆಣ್ಣೆ, ತುಪ್ಪದ ಗೊಟ್ಟನ್ನು ನೀಗಿಸುತ್ತಿದ್ದ. ಆ ಹೊತ್ತಿಗಾಗಲೇ ಕಾಲೇಜು ಮೆಟ್ಟಿಲನ್ನು ಹತ್ತಿದ್ದ ಗದ್ದಿಗ್ಯಪ್ಪನಿಗೆ ಇಂಗ್ಲೀಷು ತಲೆಗೆ ಹತ್ತದೆ, 'ಥತ್ ಇದರವ್ನ' ಅಂತ ಮೊದಲನೆಯ ವರ್ಷಕ್ಕೇ ಕಾಲೇಜಿಗೆ ಸಲಾಮು ಹೊಡೆದು ಮನೆಯಲ್ಲಿ ಉಳಿದು ಬೇಸಾಯದ ಬದುಕಿಗೆ ಒಗ್ಗಿಕೊಂಡಿದ್ದ. ವಚ್ಚಾಲಯ್ಯ ಅದರ ಬಗ್ಗೆ ಅಷ್ಟು ತಲೆ ಕೆಡಿಸಿಕೊಳ್ಳದೆ, ಇರುವ ಹೊಲದಲ್ಲಿ ಮೈ ಬಗ್ಗಿಸಿ ದುಡಿದರೆ ಅಷ್ಟೇ ಸಾಕು ಎಂಬಂತೆ ತೆಪ್ಪಗಾಗಿದ್ದ. ಆದರೆ, ಅವ್ವ ಮಾಳವ್ವ ಮಾತ್ರ 'ಈ ಮೇಟಿ ಹಾಲು ಕುಡ್ಯಾದು ಇದ್ದೇ ಐತೆ ಓದಾಕೋಗಪ್ಪ' ಅಂತ ಹೇಳೇ ಹೇಳಿದ್ದಳು. ಅವ್ವನ ಮಾತಿಗೆ ಗದ್ದಿಗ್ಯಪ್ಪ ಸೊಪ್ಪು ಹಾಕಿರಲಿಲ್ಲ. ಒಂದೆರಡು ವರ್ಷ ಅನ್ನುವುದರೊಳಗೆ ಹೊಲದ ಕೆಲಸ ಗದ್ದಿಗ್ಯಪ್ಪನ ಕೈಯ್ಯಲ್ಲಿ ಲಕಲಕಿಸತೊಡಗಿತು. ಹಂಗಾಗಿ ವಚ್ಚಾಲಯ್ಯನ ಇಪ್ಪತ್ತು ಚೀಲ ರಾಗಿಯ ಬದಲು ಐವತ್ತು ಚೀಲದವರೆಗೂ ಮುಟ್ಟಿತ್ತು. ಒಂದೆರಡು ಪಲ್ಲ ಇದ್ದ ಜೋಳ ಹತ್ತಕ್ಕೆ ಏರಿತ್ತು. ಇದರಿಂದ ವಚ್ಚಾಲಯ್ಯ ಉಬ್ಬಿ ಹೋಗಿದ್ದ. 'ಮಾಡಿದ್ರೆ ಗದ್ದಿಗನಂಗೆ ಹೊಲ ಬದುಕಿನ ನಿಗಾ ಮಾಡಬೇಕು' ಅಂತ ಊರಿನ ಹಿರಿಯರು ಮಾತಾಡುತ್ತಾ ತಮ್ಮ ಮಕ್ಕಳಿಗೆ 'ಅವನ ಕಾಲ್ದಡೀಲಿ ನುಸೀರಿ, ಆಗ ಬುದ್ಧಿ ಬರುತ್ತೆ ನಿಮ್ಗೆ' ಅಂತ ಹಂಗಿಸುತ್ತಿದ್ದರು. ಇದರಿಂದ ಮತ್ತೂ ಉಬ್ಬಿ ಹೋಗಿದ್ದ ಗದ್ದಿಗ್ಯಪ್ಪ ಮತ್ತಷ್ಟು ದೇಗುತ್ತಾ ಮನೆ ತುಂಬಾ ಎರಡು ಮೂರು ವರ್ಷಗಳಿಗಾಗುವಷ್ಟು ಧವಸದ ಚೀಲಗಳನ್ನು ಪೇರಿಸಿದ್ದ. ಯಾವಾಗ ವರ್ಷ ವರ್ಷ ಬೆಳೆ ಹೆಚ್ಚತೊಡಗಿತೋ ಮನೆಯಲ್ಲಿ ತುಂಬಿಕೊಳ್ಳಲು ಜಾಗ ಸಾಲದಾಗಿ ಹಳೆಯದನ್ನು ಮಾರುತ್ತಾ ಜಾಗ ಹೊಂದಿಸಿಕೊಳ್ಳತೊಡಗಿದ್ದ. ಇದರಿಂದ ಗದ್ದಿಗ್ಯಪ್ಪನ ಮನೆಯಲ್ಲಿ ಹಿಂದೆಂದಿಗಿಂತಲೂ ಕಾಸು ಓಡಾಡತೊಡಗಿತು.

ಹಿಂಗಿರುವಾಗ ಅಪ್ಪ ವಚ್ಚಾಲಯ್ಯನಿಗಿದ್ದ ಗೂರಲು ದಿನೇ ದಿನೇ ದೀಡಾಗುತ್ತಾ ಹೋದ ಕಾರಣದಿಂದಾಗಿ ಮನೇಲೇ ಉಳಿಯಬೇಕಾಗಿ ಬಂದಿತ್ತು. ಜೊತೆಗೆ ಉಬ್ಬುಸದ ಜೊತೆಗೂಡಿದ್ದ ರಕ್ತದೊತ್ತಡದಿಂದಾಗಿ ಅದೊಂದು ದಿನ ವಚ್ಚಾಲಯ್ಯ ಲಕ್ವಕ್ಕೊಳಗಾದ. ಅದಾಗುತ್ತಲೇ ಥಮಾಮ್ ಮೂಲೆಗೆ ಬಿದ್ದು ಬಿಟ್ಟಿದ್ದ. ಅವ್ವ ಮಾಳವ್ವನ ಹೆಗಲಿಗೆ ಎಮ್ಮೆಗಳ ಜವಾಬುದಾರಿ ಬಿದ್ದಿತ್ತು. ಒಂದು ಚಣವೂ ಕೂತು ಕಾಲಕಳೆಯದ ವಚ್ಚಾಲಯ್ಯನಿಗೆ ಹಂಗೆ ಹೆಣದಂತೆ ಬಿದ್ದಿರುವುದು ಅಸಹನೀಯವಾಗಿ ಆ ಅಸಹನೆ ಅವನನ್ನ ಮನೋರೋಗಕ್ಕೀಡು ಮಾಡಿತು. ಹಂಗಾಗಿ ಅವನು ಸಾಯುವ ಒಂದು ವರ್ಷ ಯಾವುದರ ಬಗ್ಗೆಯೂ ನೆದರಿಲ್ಲದೆ ಬದುಕಿದ್ದ.

ಅಪ್ಪನ ಸಾವಿನಿಂದ ಗದ್ದಿಗ್ಯಪ್ಪ ಭೂಮಿಗಿಳಿದುಹೋಗಿದ್ದ. ಗಂಡನ ಸಾವು